ಸೃಜನಿ

**SRUJANI: Indian Journal of Innovative Research and Development (SIJIRD)**
Volume-5 Issue 3, July-August 2026, Pp. 54-58
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಕನ್ನಡ ಮತ್ತು ಪ್ರಾಕೃತದಲ್ಲಿ ಸಂಸ್ಕೃತ ಪದಗಳ ಧ್ವನಿ ಬದಲಾವಣೆಯ ಸ್ವರೂಪ

**ಡಾ. ರವೀಂದ್ರ ಬಟಗೇರಿ**
ಉಪನ್ಯಾಸಕ, ವಳವಂಡವಾಡಿ, ಆಳಂದ, ಕಲಬುರಗಿ

***Abstract:***
*ಭಾರತದಲ್ಲಿ ಹೊಸ ಅಲೆ ಸೃಷ್ಟಿಯಾಗಿದ್ದೇ ಧರ್ಮ, ಪ್ರಾದೇಶಿಕತೆ ಮತ್ತು ಭಾಷೆಗಳಿಂದ ಎನ್ನುವಷ್ಟು ಮಟ್ಟಿಗೆ ಜನಜೀವನದೊಂದಿಗೆ ಇವುಗಳು ಹೊಂದಿಕೊಂಡಿವೆ. ಹಳೆ ಧರ್ಮದ ಜಿಡ್ಡುತನದಿಂದ ಸಿಡಿದು ಹೊಸ ಧರ್ಮಗಳು ಹುಟ್ಟಿಕೊಂಡಾಗಲೆಲ್ಲಾ ಭಾಷೆಗಳು ಆ ಧರ್ಮದ ಏಳಿಗೆಗಾಗಿ ಮಹತ್ವದ ಪಾತ್ರವಹಿಸಿವೆ. ಇವುಗಳಲ್ಲಿ ಆಡು ನುಡಿಗಳೆ ಹೆಚ್ಚಾಗಿವೆ. ಜೈನ ಧರ್ಮ ಪ್ರಾಕೃತ, ಬೌದ್ಧ ಪಾಲಿ, ಲಿಂಗಾಯತ ಕನ್ನಡದ ಆಡು ರೂಪಗಳನ್ನು ಬಳಸಿಕೊಂಡು ಜನರೊಂದಿಗೆ ಬೇರೆತವಷ್ಟೆಯಲ್ಲದೆ ಆ ಜನರ ಜೀವನದಲ್ಲಿ ಅನೇಕ ಬದಲಾವಣೆಗಳು ತಂದವು. ಈ ಮಾದರಿಯ ಎಲ್ಲ ಭಾರತಿಯ ಧರ್ಮಗಳು ಹುಟ್ಟಿ ಬೆಳೆದವು ಎನ್ನುವುದಕಿಂತ ಆ ಭಾಷಿಕ ಜನಾಂಗದ ವೈಚಾರಿಕತೆಯನ್ನು ಎತ್ತಿಹಿಡಿಯುವದರೊಂದಿಗೆ ಆ ಭಾಷೆಗೆ ಹೊಸ ಹುಟ್ಟನ್ನು ಕೊಟ್ಟವು. ಹೀಗೆ ಹೊಸ ಭಾಷೆಗಳು ಹುಟ್ಟುವಾಗ ಮೂಲ ಭಾಷೆಯ ಪದಕೋಶದೊಂದಿಗೆ ಬೇರೆ ಪ್ರಭಾವಿ ಭಾಷೆಗಳಿಂದಲು ಪದಕೋಶವನ್ನು ಸ್ವೀಕರಿಸಿದ್ದೇವೆ. ಅಥವಾ ಹಳೆಯ ಭಾಷೆಯೇ ಬೇರೆ ಭಾಷೆಗಳ ಪ್ರಭಾವಕ್ಕೆ ಸಿಲುಕಿ ಪದಕೋಶದ ಸ್ವೀಕರಿಸಿದೆ. ಹೀಗೆ ಸ್ವೀಕರಿಸುವಾಗ ಸ್ವಭಾಷೆಯ ಧ್ವನಿ ನಿಯಮಗಳಿಗೆ ಅನುಗುಣವಾಗಿ ಅನೇಕ ಬದಲಾವಣೆಗಳನ್ನು ಮಾಡಿಕೊಂಡಿದೆ. ಈ ಲೇಖನದಲ್ಲಿ ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಂದ ಸ್ವೀಕಾರವಾಗಿ ಬಂದ ಪದಗಳು ಪದಗಳು ಪಡೆದುಕೊಂಡ ಧ್ವನಿಮಾತ್ಮಕ ಬದಲಾವಣೆಗಳನ್ನು ಚರ್ಚಿಸಲಾಗಿದೆ.*

**Keywords:** *ಸಂಸ್ಕೃತ ಭಾಷೆ, ಪ್ರಾಕೃತ ಭಾಷೆ, ಸ್ವೀಕರಣ, ಧ್ವನಿ ಬದಲಾವಣೆ*

## ಪೀಠಿಕೆ

ಆಡುನುಡಿಯಾದ ಪ್ರಾಕೃತ ಭಾಷೆಗಳು ಸಂಸ್ಕಾರಗೊಂಡು ಸಂಸ್ಕೃತವಾಯಿತೆಂದು ಒಂದು ವಾದವಿದೆ; ಸಂಸ್ಕೃತವೇ ಜನರ ಬಾಯಿಯಲ್ಲಿ ವಿಕಾರ ಹೊಂದಿ ಗ್ರಾಮ್ಯವಾಗಿ ಪ್ರಾಕೃತವಾಯಿತೆಂಬ ಇನ್ನೊಂದು ವಾದವಿದೆ (ನಾಗರಾಜಯ್ಯ ಹಂಪ: 1997:36). "Probably Prakrit might have been used in the general sense opposite to that of Sanskrit, Prakrit applied to ordinary common speechar against highly polished perfected Sanskrit (Padmashekhar:1998:11). ಪಾಕೃತವು ಸಂಸ್ಕೃತದ ವಿರೋಧದ ಕಾರಣಕ್ಕಾಗಿ ಹುಟ್ಟಿದೆ ಎಂಬ ಬಲವಾದ ನಂಬಿಕೆಯೊಂದಿದೆ. "The terms 'Sanskrit' and 'Prakrit' are only of recent origin, originally Prakrit was indicted by 'Apabramsa' and Sanskrit was by Bhasha or Shabda (Padmashekhar: 1998:01). ಇವುಗಳಲ್ಲಿ ಯಾವುದು ಮೂಲ ಯಾವುದು ಆನಂತರ ಈ ಪ್ರಶ್ನೆ ಬಲು ತೊಡಕಿನದು.

***Please cite this article as:*** ರವೀಂದ್ರ ಬಟಗೇರಿ. (2026). ಕನ್ನಡ ಮತ್ತು ಪ್ರಾಕೃತದಲ್ಲಿ ಸಂಸ್ಕೃತ ಪದಗಳ ಧ್ವನಿ ಬದಲಾವಣೆಯ ಸ್ವರೂಪ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್*, 5(3), 54–58

ಏಕೆಂದರೆ ಈ ಎರಡು ಭಾಷೆಗಳಿಗೂ ಮೂಲ ಭಾಷೆ ಎಂದು ಸಾಬೀತು ಪಡಿಸುವ ಕಸುವು ಇದೆ ಮತ್ತು ಇವುಗಳಲ್ಲಿ ಯಾವುದು ಶ್ರೇಷ್ಠ ಅಥವಾ ಕನಿಷ್ಠವಲ್ಲ. ಈ ಎರಡು ಭಾಷೆಗಳು ಒಂದೊಂದು ಜನ ಸಮೂದಾಯವನ್ನು ಪ್ರತಿನಿಧಿಸುತ್ತ ಆ ಸಾಮುದಾಯದ ವೈಚಾರಿಕತೆಯನ್ನು ಅಭಿವ್ಯಕ್ತಿ ಪಡಿಸಿವೆ. ಸಂಸ್ಕೃತ ಒಂದಷ್ಟು ಕಠಿಣತೆಗೆ ಒತ್ತು ಕೊಟ್ಟರೇ ಪ್ರಾಕೃತ ಸರಳತೆಯನ್ನು ಒಪ್ಪಿಕೊಂಡು ಜನ ಸಾಮಾನ್ಯರ ಧ್ವನಿಯಾಗಿದೆ.

ಜಗತ್ತಿನ ಭಾಷೆಗಳನ್ನು ಒಟ್ಟು ಹನ್ನೆರಡು ಭಾಷಾ ಪರಿವಾರಗಳಲ್ಲಿ ವಿಂಗಡಿಸಲಾಗಿದೆ. ಈ ಹನ್ನೆರಡು ಭಾಷಾ ಪರಿವಾರಗಳಲ್ಲಿ ಪ್ರಾಕೃತವು ಇಂಡೋ–ಆರ್ಯನ್(ಯುರೋಪಿಯನ್) ಭಾಷಾ ಪರಿವಾರಕ್ಕೆ ಸೇರಿದೆ. ಈ ಭಾಷಾ ಪರಿವಾರವನ್ನು ಮತ್ತೆ ಎಂಟು ವರ್ಗಗಳಲ್ಲಿ ವಿಭಾಗಿಸಲಾಗಿದೆ. ಈ ಉಪ ಪರಿವಾರಗಳಲ್ಲಿ ಇದು ಭಾರತ–ಇರಾನಿ(ಆರ್ಯ) ಉಪಪರಿವಾರಕ್ಕೆ ಸೇರಿದೆ. ಈ ಉಪಪರಿವಾರದಲ್ಲಿ ಇರಾನಿ ಶಾಖಾ ಪರಿವಾರ, ದರದ ಶಾಖಾ ಪರಿವಾರ ಮತ್ತು ಭಾರತೀಯ ಆರ್ಯ ಎಂಬ ಮೂರು ಪರಿವಾರಗಳಿವೆ. ಇದರಲ್ಲಿ ಪ್ರಾಕೃತವು ಭಾರತೀಯ ಆರ್ಯ ಪರಿವಾರಕ್ಕೆ ಸೇರಿದೆ. ಈ ಭಾಷೆಗಳು ಕ್ರಿ.ಪೂ.ದ ಕೊನೆಯ ಶತಮಾನದಲ್ಲಿ ತನ್ನ ಸ್ವರೂಪವನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿ, ಕ್ರಿಸ್ತಶಕದ ಎರಡನೆಯ ಶತಮಾನದಲ್ಲಿ ಎಲ್ಲ ಪ್ರಾಕೃತ ಭಾಷೆಗಳು ಉಂಟಾಗಿರಬೇಕೆಂದು ಭಂಢಾರಕರ್ ಹೇಳುತ್ತಾರೆ (ಉದೃತ. ರಘುನಾಥ ಬಿಡೆ:1952). ಈ ಕಾಲಕ್ಕಾಗಲೇ ದ್ರಾವಿಡ ಭಾಷೆಗಳು ತಮ್ಮ ಸ್ಪಷ್ಟ ಸ್ವರೂಪವನ್ನು ಪಡೆದಿರುವ ಬಗ್ಗೆ ಅಧ್ಯಯನಗಳಿಂದ ಸಾಬಿತಾಗಿದೆ ಮತ್ತು ಕನ್ನಡ, ತಮಿಳು ಮತ್ತು ತೆಲಗು ಈ ಭಾಷೆಗಳ ಶಬ್ದ ಸಮೃದ್ಧಿಯಲ್ಲಿ ಪ್ರಾಕೃತ ಭಾಷೆಗಳ ಪ್ರಭಾವ ತುಂಬ ಇದೆ (ಉಪಾಧ್ಯೆ ಎ.ಎನ್.:1965). ಹಾಗೆಯೇ ಜನಭಾಷೆಯಾದ ಪ್ರಾಕೃತಕ್ಕೂ ಜನಭಾಷೆಯಾದ ಕನ್ನಡಕ್ಕೂ ನಿಕಟ ನಂಟಿದೆ. ಇದು ಇಂದು ನಿನ್ನೆಯದಲ್ಲ ಕನ್ನಡವು ತನ್ನ ಚಹರೆಯನ್ನು ಕಟ್ಟಿಕೊಳ್ಳುತ್ತಿರುವ ಹಂತದಲ್ಲೇ ಅದನ್ನು ಸಲುಹಿದ್ದು ಪ್ರಾಕೃತ ಭಾಷೆಗಳೇ ಎನ್ನಬಹುದೇನೋ ಈ ಕಾರಣದಿಂದಲೇ ಈ ಹಿಂದಿನ ಅಧ್ಯಯನಗಳು ದ್ರಾವಿಡ ಭಾಷೆಗಳನ್ನು ಇಂಡೋ ಆರ್ಯನ್ ಭಾಷಾ ವಂಶಕ್ಕೆ ಸೇರಿಸಿರಬೇಕು.

ಸಂಸ್ಕೃತ ಪದರೂಪಗಳು ಕನ್ನಡಕ್ಕೆ ಸ್ವೀಕರಣವಾಗುವಾಗ ನೇರವಾಗಿ ಯಾವುದೇ ಬದಲಾವಣೆಯಿಲ್ಲದೆ ತತ್ಸಮವಾಗಿ ಮತ್ತು ಧ್ವನಿ ಬದಲಾವಣೆ ಹೊಂದಿ ತದ್ಭವಗಳಾಗಿ ಸೇರಿದವು. ಇದರಂತೆಯೇ ಪ್ರಾಕೃತ ರೂಪಗಳು ಕೂಡ ತತ್ಸಮ–ತದ್ಭವಗಳಾಗಿ ಸೇರಿಕೊಂಡಿವೆ. ಇವುಗಳನ್ನು ತತ್ಸಮ–ತದ್ಭವಗಳೆಂದು ಗುರುತಿಸದೆ ಸಂಸ್ಕೃತ ರೂಪಗಳು ಪ್ರಾಕೃತದ ಮೂಲಕ ಕನ್ನಡಕ್ಕೆ ಸೇರಿವೆ ಎಂದು ಹೇಳಲಾಗುತ್ತೆ. ಪ್ರಾಕೃತ ಭಾಷೆಗಳಿಂದ ಕನ್ನಡವು ಪ್ರಭಾವಕೊಳಗಾಗಿರುವುದನ್ನು ಶ್ರೀವಿಜಯ, ನಾಗವರ್ಮ, ಕೇಶಿರಾಜ ಅನೇಕ ವೈಯಾಕರಣಿಗಳು ವಿವರಿಸಿದ್ದಾರೆ (ನಾಗರಾಜಯ್ಯ ಹಂಪ:1997:36). ಕನ್ನಡ ವೈಯಾಕರಣರು ತದ್ಭವ ಪ್ರಕರಣವಲ್ಲದೆ, ಅಪಭ್ರಂಶ ಪ್ರಕರಣವನ್ನು ರಚಿಸಿ (ಮುಖ್ಯವಾಗಿ ಕೇಶಿರಾಜ) ಅದರಲ್ಲಿ ಪ್ರಾಕೃತ ಪ್ರಭಾವದ ಸ್ವರೂಪವನ್ನು ವಿವರಿಸಿದ್ದಾರೆ ಮತು ಇಂದು ಕನ್ನಡದಲ್ಲಿರುವ ಸಂಸ್ಕೃತ ತದ್ಭವಗಳು ಪ್ರಾಕೃತ ಮೂಲಕವೇ ಕನ್ನಡಕ್ಕೆ ಬಂದಿವೆ ಎಂಬ ವಾದವಿದೆ. ಪ್ರಸ್ತುತ ಈ ಲೇಖನದಲ್ಲಿ ಸಂಸ್ಕೃತ ಮೂಲದ ಪದಗಳು ಪ್ರಾಕೃತ ಮತ್ತು ಕನ್ನಡ ಈ ಎರಡು ಭಾಷೆಗಳಲ್ಲಾದ ಧ್ವನಿ ಬದಲಾವಣೆಯನ್ನು ಒಂದು ನಿಯಮ ಮಾಡಿ ಗುರುತಿಸುವ ಉದ್ದೇಶವಿದೆ. ಈ ಮಾದರಿಯ ಅಧ್ಯಯನಗಳ ಅತಿ ಅವಶ್ಯಕತೆ ಇದೆ ಮತ್ತು ಇಂತಹ ಅಧ್ಯಯನಗಳು ಕನ್ನಡ ಭಾಷೆಯ ತನಿಯತೆಯನ್ನು ಇನ್ನಷ್ಟು ಗಟ್ಟಿಯಾಗಿ ಅರಿಯುವ ಕಸುವು ಹೊಂದಿರುತ್ತವೆ.

## ಧ್ವನಿ ಬದಲಾವಣೆ ಸ್ವರೂಪ

### ಸ್ವರ

ಋ
- *>ಅ– ಣಚ್ಚ<ನೃತ್ಯ, ಮಯಂ<ಮೃಗ, ತಣ<ತೃಣ*
- *>ಇ– ಇಸಿ ಮಂಡಲ < **ಋ**ಷಿ ಮಂಡಲ, ಮಾಇ <ಮಾತೃ, ಗಿದ್ದ<ಗೃದ್ಧ*
- *>ಉ– ಮುಸಾ< ಮೃಷಾ,*
- *>ರಿ– ರಿಣಂ<ಋಣಂ, ರಿಸೀ<ಋಷಿ, ಸರಿಸೋ<ಸದೃಶಃ*

ಕನ್ನಡದಲ್ಲಿ **'ಋ'**ಕಾರ ತದ್ಭವ ಹೊಂದುವಾಗ **'ರು'**ಕಾರ ಬಳಕೆಯಲ್ಲಿದೆ. ***ರುಷಿ<ಋಷಿ, ರುಣ<ಋಣ, ರುತು<ಋತು, ರುಜು<ಋಜು*** ಇತ್ಯಾದಿ ಗುರುತಿಸಬಹುದು. ಕೆಲವೊಮ್ಮೆ ಇದು 'ರಿ'ಯಾಗಿ ಬದಲಾಗಿದೆ. ಉದಾ. ರಿಷಿ/ರಿಸಿ, ರಿಣ ಇತ್ಯಾದಿ.

ಐ
- *>ಎ– ಸೇಲೊ<ಶೈಲ, ಮೇತ್ತಿ<ಮೈತ್ರಿ*
- *>ಅಇ– ಕಇಲಾಸ<ಕೈಲಾಸ, ಸಇನ್ಯ<ಸೈನ್ಯ*

ಔ
- *>ಓ–ಓಸವ<ಔಷದ,ಕೋಉಯ<ಕೌತುಕ, ಮೋಲಿ<ಔಲಿ*
- *>ಉ– ಉದುಂಬುರ<ಔದುಂಬರ*
- *>ಅಉ– ಕಉಸಲ<ಕೌಶಲ, ಪಉರಿಸ< ಪೌರುಷ*

**'ಐ'** ಮತ್ತು **'ಔ'**ಗಳು ಕನ್ನಡದಲ್ಲಿ ಇಲ್ಲ ಎಂಬ ವಾದವಿದೆ ಮತ್ತು ಕನ್ನಡದಲ್ಲಿ ಈ ಎರಡು ಸ್ವರಗಳ ವರ್ತನೆಯು ಬರವಣಿಗೆ ಮತ್ತು ಆಡುಮಾತಿನಲ್ಲಿ ಬೇರೆ ಬೇರೆ ರೀತಿಯಲ್ಲಿದೆ. ಸಂಸ್ಕೃತದಿಂದ ಈ ಅಕ್ಷರಯುಕ್ತ ಪದಗಳನ್ನು ಕನ್ನಡದಲ್ಲಿ ತದ್ಭವ ಮಾಡುವಾಗ ***'ಯ'(ಶೈಲ>ಸಯಿಲ)*** ಮತ್ತು ***'ವ'(ಔಷದ> ಅವುಶದ)***ಕಾರಗಳು ಆಗಮವಾಗುತ್ತವೆ. ಕನ್ನಡಲ್ಲಿ ***'ಯ'*** ಮತ್ತು ***'ವ'***ಕಾರಗಳು ಅರೇ ಸ್ವರದಂತೆ ಕೆಲಸ ನಿರ್ವಹಿಸುತ್ತವೆ ಮತ್ತು ಕನ್ನಡದಲ್ಲಿ ಪದ ಮಧ್ಯ ಸ್ವರದಿಂದ(ಸಂಸ್ಕೃತ ಮತ್ತು ಪ್ರಾಕೃತದಂತೆ ***ಕಇಲಾಸ, ಕಉಸಲ*** ಈ ಮಾದರಿಯ ರಚನೆಗಳು ಸಾಧ್ಯವಿಲ್ಲ) ಕೂಡಿದ ರಚನೆ ಇಲ್ಲ. ಆದ್ದರಿಂದಲೇ ಸಂಸ್ಕೃತದ ***'ಐ'*** ಮತ್ತು ***'ಔ'*** ಕಾರಯುಕ್ತ ಪದಗಳು ಕನ್ನಡದಲ್ಲಿ ತದ್ಭವವಾಗುವಾಗ ಕನ್ನಡ ನಿಯಮದಂತೆ ಆ ಸ್ಥಾನದಲ್ಲಿ ***'ಯ'*** ಮತ್ತು ***'ವ'*** ಕಾರಗಳು ಬರುತ್ತಿವೆ.

ಕನ್ನಡ ಮತ್ತು ಪ್ರಾಕೃತ ಎರಡರಲ್ಲೂ **ವಿಸರ್ಗ(ಃ)**ವಿಲ್ಲ. ಸಂಸ್ಕೃತದ ವಿಸರ್ಗಯುಕ್ತ ಪದಗಳು ಈ ಎರಡು ಭಾಷೆಯಲ್ಲಿ ತದ್ಭವವಾಗಿ ವಿಸರ್ಗರಹಿತವಾಗುತ್ತವೆ. ಪ್ರಾಕೃತದಲ್ಲಿ **'ಎ'** ಮತ್ತು **'ಒ'** ಬಳಕೆಗೊಂಡರೆ, ಕನ್ನಡದಲ್ಲಿ, ಪದಗಳ ರಚನೆಯ ಸಾಮಾನ್ಯ ನಿಯಮದಂತೆ ಪದಾಂತ್ಯ **'ಉ'**ಕಾರವನ್ನು ಪಡೆದುಕೊಳ್ಳುತ್ತವೆ. ಉದಾ:

| **ಸಂಸ್ಕೃತ** | **ಪ್ರಾಕೃತ** | **ಕನ್ನಡ** |
|---|---|---|
| *ರಾಮಃ>* | *ರಾಮೇ, ರಾಮೋ,* | *ರಾಮನು* |
| *ವೃಕ್ಷಃ>* | *ವೃಚ್ಛೋ,* | *ವೃಕ್ಷವು* |
| *ಜಿನಃ>* | *ಜಿಣೋ* | *ಜಿನನು* |
| *ದುಃಖಃ>* | *ದುಖೋ* | *ದುಕ್ಕವು* ಇತ್ಯಾದಿ... |

ಆದರೆ, ಪ್ರಾಚೀನ ಕನ್ನಡದಲ್ಲಿ ಸಂಸ್ಕೃತ ಕಾವ್ಯಗಳ ಪ್ರಭಾವದಿಂದ ಈಗಲೂ ಬರವಣಿಗೆಯಲ್ಲಿ ಸಂಸ್ಕೃತ ಮಾದರಿಯ ಬರವಣಿಗೆಯ ರೂಪಗಳು ಸಿಗುತ್ತವೆ.

### ವ್ಯಂಜನ

ಸಂಸ್ಕೃತ ಅಲ್ಪಪ್ರಾಣ ವ್ಯಂಜನಗಳು ಪ್ರಾಕೃತದಲ್ಲಿ ಕ್ರಮವಾಗಿ **'ಯ'**ಕಾರವಾಗಿ ಬದಲಾಗುತ್ತವೆ.

ಯ
- **< ಕ –** ಸ**ಯ**ಲ<ಸ**ಕ**ಲ, ಮ**ಯ**ರ<ಮ**ಕ**ರ
- **< ಗ –** ಸಾ**ಯ**ರ<ಸಾ**ಗ**ರ, ಮ**ಯ**<ಮೃ**ಗ**
- **< ಚ –** ಆ**ಯಾ**ರ<ಆ**ಚಾ**ರ, ಕ**ಯ**<ಕ**ಚ**
- **< ಜ –** ರ**ಯ**ಯ<ರ**ಜ**ತ, ಪು**ಯಾ**<ಪೂ**ಜಾ**
- **<ತ –** ಕೇಸೀ ಗೋ**ಯ**ಮ< ಕೇಶಿ ಗೌ**ತ**ಮ, ಪಉಮ ಚರಿ**ಯ**< ಪದ್ಮ ಚರಿ**ತ**
- **<ದ –** ಪಾ**ಯ**< ಪಾ**ದ,** ವ**ಯ**ನ< ವ**ದ**ನ ಇತ್ಯಾದಿ..

ಆದರೆ, ಕನ್ನಡದಲ್ಲಿ ವರ್ಗದ ಪ್ರಥಮ ಅಲ್ಪಪ್ರಾಣ ಧ್ವನಿಗೆ ಅದೇ ವರ್ಗದ ತೃತೀಯ ಅಲ್ಪಪ್ರಾಣ ಧ್ವನಿ ಬರುತ್ತಿದೆ. ಉದಾ.

**ಕ>ಗ–** ಆ**ಕಾ**ಶ> ಆ**ಗ**ಸ, ಕಡ**ಕ** > ಕಡ**ಗ,** ಡಮರು**ಕ**> ಡಮರು**ಗ**

**ಟ>ಡ–** ಅ**ಡ**ವಿ> ಅ**ಟ**ವಿ, ಕ**ಟ**ಕ>ಕ**ಡ**ಗ, ಘ**ಟಿ**ಕಾ> ಗ**ಡಿ**ಗೆ

**ತ>ದ–** ವಸ**ತಿ**> ಬಸ**ದಿ** ಇತ್ಯಾ**ದಿ...**

**ಆರ್ಯ>ಅಜ್ಜ, ಅಯ್ಯ, ಕಾರ್ಯ>ಕಜ್ಜ**

ಇಂಥ ಕೆಲವು ಧ್ವನಿಪರಿವರ್ತನೆಯಾದ ಉದಾಹರಣೆಗಳು ಕಂಡು ಬರುತ್ತಿವೆ. ಇವು ಪ್ರಾಕೃತದಿಂದ ಕನ್ನಡಕ್ಕೆ ಬಂದಿರಬೇಕು. ಈ ಬಗೆ ಇನ್ನಷ್ಟು ಆಳವಾದ ಅಧ್ಯಯನದ ಆಗತ್ಯತೆ ಇದೆ.

ಮಹಾಪ್ರಾಣಾಕ್ಷರಗಳು ತದ್ಭವವಾಗುವಾಗ ಕನ್ನಡ ಮತ್ತು ಪ್ರಾಕೃತ ಎರಡರಲ್ಲಿಯೂ ಬೇರೆ ಬೇರೆ ರೀತಿಯ ಧ್ವನಿ ಬದಲಾವಣೆಗೆ ಒಳಗಾಗುತ್ತಿವೆ. ಕನ್ನಡದಲ್ಲಿ ಎಲ್ಲ ಮಹಾಪ್ರಾಣಗಳು ಅಲ್ಪ ಪ್ರಾಣಗಳಾಗಿ ಬದಲಾದರೇ ಪ್ರಾಕೃತದಲ್ಲಿ **‘ಹ’** ಕಾರವಾಗಿ ಬದಲಾಗುತ್ತಿವೆ. ಉದಾ.

ಖ>ಹ– ಸುಖ>ಸುಹ, ಮುಖ> ಮುಹ, ಶಾಖಾ> ಶಾಹಾ

ಘ>ಹ– ಮೇಘ> ಮೇಹ, ರಾಘವ>ರಾಹವ, ಲಘು>ಲಹು

ಥ>ಹ– ಪಥ<ಪಹ, ರಥ>ರಹ, ಕಥಾ>ಕಹಾ, ಗಾಥಾ>ಗಾಹೆ

ಧ>ಹ– ಅಧರ>ಅಹರ, ಮಧುರ> ಮಹರ, ಸುಧಾ>ಚುಹಾ

ಫ>ಹ– ಸಫಲ> ಸಹಲ, ಶಿಪಾ> ಸಿಹಾ

ಭ>ಹ– ಲಾಭ>ಲಾಹ, ಲೋಭ>ಲೋಹ, ಶುಭ>ಸುಹ ಇತ್ಯಾದಿ...

ಕನ್ನಡದಲ್ಲಿ ಮಹಾಪ್ರಾಣದ ಬದಲಾಗಿ **‘ಹ’**ಕಾರ ಬಳಕೆಯಾಗುತ್ತಿಲ್ಲ(ಬರವಣಿಗೆಯಲ್ಲಿ). ಸಂಸ್ಕೃತದ ಮಾಹಾಪ್ರಾಣಗಳೆಲ್ಲ ಕನ್ನಡದಲ್ಲಿ ಅಲ್ಪಪ್ರಾಣಗಳಾಗಿ ಬಳಕೆಗೊಳ್ಳುತ್ತಿವೆ(ಮಾತಿನಲ್ಲಿ). ಇದಕ್ಕೆ ವ್ಯತರಿಕ್ತವಾಗಿ, ಉತ್ತರ ಕರ್ನಾಟಕದ ಆಡು ನುಡಿಯಲ್ಲಿ **ಮರಾಠಿ, ಉರ್ದು** ಪದಗಳ ಪ್ರಾಭಾವದಿಂದ ಅನೇಕ ಪದಗಳ ಉಚ್ಚರಣೆಯಲ್ಲಿ **‘ಹ’**ಕಾರದ ಛಾಯೆ ಕಂಡುಬಂದು ಮಹಾಪ್ರಾಣದಂತೆ ಉಚ್ಚರಿಸಲ್ಪಡುತ್ತವೆ. ಈ ಮಹಾಪ್ರಾಣಗಳು ಕನ್ನಡದಲ್ಲಿ ಇಲ್ಲದಿರುವುದರಿಂದ ಕನ್ನಡದಲ್ಲಿ ಅಲ್ಪಪ್ರಾಣ ಧ್ವನಿಗಳಾಗಿ ಬದಲಾಗುತ್ತಿವೆ ಅಥವಾ ಕನ್ನಡದಲ್ಲಿ **‘ಯ’** ಮತ್ತು **‘ವ’**ದ ಹಾಗೆ **‘ಹ’**ಕಾರವು ಸ್ವರದಂತೆ ವರ್ತಿಸುವ ಕಾರಣದಿಂದ ಇದು ಕನ್ನಡದಲ್ಲಿ ವ್ಯಂಜನ ಧ್ವನಿಯ ಬದಲಾಗಿ ಬರಲಾರದು ಆ ಸ್ಥಾನದಲ್ಲಿ ಅಲ್ಪಪ್ರಾಣಗಳು ಬರುತ್ತಿವೆ.

ಇವುಗಳಲ್ಲದೆ ಇನ್ನು ಕೆಲವು ಧ್ವನಿ ಪರಿವರ್ತನೆಯಾದ ಮಾದರಿಗಳನ್ನು ಗಮನಿಸಬಹುದು.

**ತ>ಚ–** ಸಮರಾಧಿತ್ಯ ಕಥಾ> ಸಮರಾಇ**ಚ್ಚ** ಕಹ

**ದ>ಜ–** ಅಂಗವಿ**ಜ್ಜಾ**<ಅಂಗವಿ**ದ್ಯಾ, ಪ**ದ್ದತಿ**>ಪಜ್ಜ**

**ನ>ಣ–** ವಾನರ ಕಥಾ<ವಾಣರ ಕಹಾ, **ನ್ಯಾ**ಯಧರ್ಮ ಕಥಾ> **ಣಾ**ಯಧರ್ಮ ಕಹಾಓ

**ಮ>ವ–** ಗ್ರಾಮಿಣ> ಗಾವಿಲ

**ಶ> ಸ–** **ಶ**ಂಕು>**ಸ**ಂಕು, **ಶೀ**ತ> **ಸೀ**ತೆ, ಯ**ಶೋ**ಧರ ಚರಿತ>ಜ**ಸ**ಹರ ಚರಿಉ

**ಷ> ಛ–** **ಷ**ಟ್ಕರ್ಮ>**ಛ**ಕ್ಕಮ, **ಷ**ಟ್ಕಾಯ> **ಛ**ಕ್ಕಾಯ,

ಈ ಮೇಲಿನ ಧ್ವನಿ ಬದಲಾವಣೆಗಳಲ್ಲಿ ಕನ್ನಡದಲ್ಲಿ **ನ>ಣ**(ಅಂಕನ>ಅಂಗಣ), **ಮ>ವ**(ಗ್ರಾಮಿಣ>ಗಾವಿಲ), **ಪ>ವ**(ದೀಪಿಕಾ>ದಿವಿಗೆ), **ವ>ಬ(ವೈ**ಶಾಕ>**ಬೇ**ಸಿಗೆ), **ಪ>ಹ(ಪಾ**ದುಕೆ>**ಹಾ**ವುಗೆ)

ಇತ್ಯಾದಿ ಧ್ವನಿ ಬದಲಾವಣೆಗಳು ಆಗಿವೆ. ಇವು ಕನ್ನಡದ ಧ್ವನಿ ಬದಲಾವಣೆ ನಿಯಮದ ಅನುಸಾರವಾಗಿ ನಡೆದ ಬದಲಾವಣೆಗಳಾಗಿವೆ. ಈ ಧ್ವನಿ ಬದಲಾವಣೆಗಳು ದೇಸಿ ಪದಗಳಲ್ಲೂ ನಡೆದಿರುವುದು ಕಾಣಬಹುದಾಗಿದೆ. **ನ>ಣ** ಈ ಧ್ವನಿ ಬದಲಾವಣೆಯು ದ್ರಾವಿಡದಿಂದ ಪ್ರಾಕೃತಕ್ಕೆ ಹೋಗಿದೆ ಎಂದು ಅಧ್ಯಯನಗಳು ಸಾಬಿತು ಪಡಿಸಿವೆ. ಇದೆಲ್ಲಕಿಂತ ಮುಖ್ಯವಾಗಿ ಕನ್ನಡದಲ್ಲಿ **‘ಡ’, ‘ಣ’, ‘ರ’, ‘ಲ’** ಮತ್ತು ‘ಳ’ ಈ ಧ್ವನಿಗಳ ಬದಲಾವಣೆ ವಿಶೇಷವಾಗಿದೆ. ಉದಾ.

**ಡ>ಳ– ಕೂಷ್ಮಾಂಡ> ಕುಂಬಳ, ದಾಡಿಮ >ದಾಳಿಂಬ**

**ಣ>ಳ– ಅಂಗಣ> ಅಂಗಳ, ಕಂಕಣ> ಕಂಕಳ, ಗಿಣಿ> ಗಿಳಿ**

**ಲ>ಳ– ಇಲಿಕಾ> ಇಳಿಗೆ,**

**ರ>ಳ– ಅಂಗಾರ> ಇಂಗಳ**

ಇಷ್ಟು ಮಾದರಿಯಲ್ಲಿ ಸಂಸ್ಕೃತ ಪದಗಳು ಪ್ರಾಕೃತ ಮತ್ತು ಕನ್ನಡದಲ್ಲಿ ತದ್ಭವ ಮಾಡುವಾಗ ಧ್ವನಿ ಬದಲಾವಣೆಗಳು ನಡೆದಿದೆ.

ಈ ಪತ್ರಿಕೆಯು ಮುಖ್ಯವಾಗಿ ಪದಗಳನ್ನು ಸಂಸ್ಕೃತದಿಂದ ತದ್ಭವವಾಗಿ ಕನ್ನಡ ಅಥವಾ ಪ್ರಕೃತಕ್ಕೆ ಸ್ವೀಕರಿಸುವಾಗ ಮಾಡಿಕೊಂಡ ಧ್ವನಿ ಬದಲಾವಣೆಗಳನ್ನು ಗಮನಿಸಿ ಇಲ್ಲಿ ವಿವರಿಸಲಾಗಿದೆ. ಇದು ಪ್ರಾಥಮಿಕ ವಿವರ ಒಳಗೊಂಡಿದೆ. ಧ್ವನಿ

ಬದಲಾವಣೆಯನ್ನು ಒಂದು ನಿಯಮ ಮಾಡಿ ಹೇಳುವ ಉದ್ದೇಶ ಈ ಪತ್ರಿಕೆಗಿದ್ದರೂ ಅದು ಇನ್ನಷ್ಟು ಮಾಹಿತಿ ಸಮಗ್ರಹಿಸಿ ವಿಶ್ಲೇಷಣೆಗೊಳಪಡಿಸಿದಾಗ ಸಾಧ್ಯವಾಗುವಂತದ್ದು ಎನಿಸುತ್ತದೆ. ಈ ದಿಸೆಯಲ್ಲಿ ಇನ್ನಷ್ಟು ಅಧ್ಯನಗಳು ಈ ಸಮಸ್ಯೆಯನ್ನು ಇನ್ನಷ್ಟು ತಿಳಿಗೊಳಿಸಬಲ್ಲವೆಂಬ ನಂಬಿಕೆ ಈ ಪತ್ರಿಕೆಯದಾಗಿದೆ.

**ಆಧಾರ ಗ್ರಂಥಗಳು**


- ಅನಂತನಾರಾಯಣ, ಎಚ್.ಎಸ್. (1973). *A Prakrit Reader*. ಭಾರತೀಯ ಭಾಷಾ ಸಂಸ್ಥಾನ.
- ಬಡಿಗೇರ ಪಿ. ಬಿ. (1978). *ಪ್ರಾಕೃತ ಭಾಷೆಗಳು.* ಅಭಿನಂದನ ಪ್ರಕಾಶನ, ಮೈಸೂರು.
- ಬಡಿಗೇರ ಪಿ. ಬಿ. (1982). *ಪ್ರಾಕೃತ ಪ್ರಕಾಶ,* ಅಭಿನಂದನ ಪ್ರಕಾಶನ, ಮೈಸೂರು.
- ಜಯಚಂದ್ರ, ಎಂ.ಎ. (ಸಂ.). (1990). *Prakrit Barati,* ಮೊದಲ ರಾಷ್ಟ್ರೀಯ ಪ್ರಾಕೃತ ವಿಚಾರ ಸಂಕಿರಣದ ಸ್ವಾಗತ ಸಮಿತಿ.
- ಪದ್ಮಶೇಖರ. (1998). *Purview of Prakrit*. ಸಂವಹನ, ಮೈಸೂರು
- ರಘುನಾಥ ಬಿಡೆ. (1952). *ಅರ್ದ ಮಾಗಧಿ ವ್ಯಾಕರಣ ಮೂಲ ತತ್ವಗಳು*, ದಿ ಸ್ಟೂಡಂಟ್ ಓನ್ಸ್ ಬುಕ್ ಡಿಪೋ, ಧಾರವಾಡ
- ಸುರೇಶಕುಮಾರ, ಎನ್. (2000). *ಪ್ರಾಕೃತ ಭಾಷೆ–ಸಾಹಿತ್ಯ,* ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.
- ಉಪಾದ್ಯೆ, ಎ.ಎನ್. (1965). ಪಾಲಿ ಮತ್ತು ಪ್ರಾಕೃತ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.